**ಓ.ಎಸ್. ನಂಃ 224/2019**

**ಪಿ.ಡಬ್ಲ್ಯೂಃ 1**

**ದಿನಾಂಕ 30.08.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಎಸ್.ಎಂ.ಎಂ ವಕೀಲರಿಂದಃ**

1. ನಾನು ಅನಕ್ಷರಸ್ಥನಾಗಿರುತ್ತೇನೆ. ನನ್ನ ತಂದೆಯವರು ಖರೀದಿಸಿದ ಆಸ್ತಿಗೆ ಪ್ರತಿವಾದಿಯು ಅಡ್ಡಿ ಪಡಿಸಿದ ಕಾರಣ ನಾನು ಈ ದಾವೆಯನ್ನು ಹೂಡಿರುತ್ತೇನೆ. ನನ್ನ ತಂದೆಯ ಹೆಸರು ಹೆಗಡಿ ಸಣ್ಣೇಗೌಡ ಅಂಥ ಇರುತ್ತದೆ. ನನ್ನ ತಂದೆಗೆ ನಾನು ಒಬ್ಬನೆ ಮಗ. ನನ್ನ ತಂದೆಗೆ ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ, ಅವರ ಹೆಸರು ರೇಣುಕಮ್ಮ ಮತ್ತು ತಿಮ್ಮಜಮ್ಮ ಅಂಥ ಇರುತ್ತದೆ. ನನ್ನ ಸಹೋದರಿಯಾದ ರೇಣುಕಮ್ಮ ಮರಣ ಹೊಂದಿದ್ದು, ಅವರ ಮಕ್ಕಳು ಜೀವಂತ ಇದ್ದಾರೆ. ನನ್ನ ಇನ್ನೊಬ್ಬ ಸಹೋದರಿಯಾದ ತಿಮ್ಮಜಮ್ಮ ರವರು ಜೀವಂತ ಇದ್ದಾರೆ.

2. ನನ್ನ ತಾತನ ಹೆಸರು ಹೆಗಡಿ ತಿಮ್ಮೇಗೌಡ ಅಂಥ ಇರುತ್ತದೆ. ನನ್ನ ತಾತನಾದ ಹೆಗಡಿ ತಿಮ್ಮೇಗೌಡರಿಗೆ ಒಟ್ಟು ನಾಲ್ಕು ಜನ ಮಕ್ಕಳು.  ಅವರ ಹೆಸರು ತಿಮ್ಮೇಗೌಡ, ಕರೀಗೌಡ, ಹುಚ್ಚೇಗೌಡ ಮತ್ತು ನನ್ನ ತಂದೆಯಾದ ಹೆಗಡಿ ಸಣ್ಣೇಗೌಡ ಅಂಥ ಇರುತ್ತದೆ. ಈ ದಾವೆಯಲ್ಲಿ ನನ್ನ ಸಹೋದರಿಯಾದ ತಿಮ್ಮಜಮ್ಮ ಮತ್ತು ನನ್ನ ಮೃತ ಸಹೋದರಿಯಾದ ರೇಣುಕಮ್ಮ ರವರ ವಾರಸುದಾರರನ್ನು ಪಕ್ಷಗಾರರನ್ನಾಗಿ ಮಾಡಲು ನನಗೆ ಯಾವುದೇ ತೊಂದರೆ ಇರಲಿಲ್ಲ.

3. ದಾವಾ ಆಸ್ತಿಯನ್ನು ನನ್ನ ತಂದೆಯಾದ ಸಣ್ಣೇಗೌಡರು ಚಿಕ್ಕಮ್ಮ ಎನ್ನುವವರಿಂದ ಖರೀದಿಸಿರುತ್ತಾರೆ. ದಾವಾ ಆಸ್ತಿಯ ಮಾರಾಟಗಾರರಾದ ಚಿಕ್ಕಮ್ಮ ರವರಿಗೆ ಮೂಲತಹ ತಮ್ಮ ತಂದೆಯಿಂದ ದಾವಾ ಆಸ್ತಿ ಬಂದಿತ್ತು. ಚಿಕ್ಕಮ್ಮ ರವರಿಗೆ ಸೇರಿದ ಬೇರೆ ಆಸ್ತಿಗಳು ದಾವಾ ಆಸ್ತಿಯ ಅಕ್ಕ ಪಕ್ಕದಲ್ಲಿ ಇಲ್ಲ. ದಾವಾ ಆಸ್ತಿಯನ್ನು ನನ್ನ ತಂದೆ ಖರೀದಿಸಿದ್ದ ವಿಷಯವು ನನಗೆ 2019 ರಲ್ಲಿ ಗೊತ್ತಾಗಿರುತ್ತದೆ. 2019 ರ ವರೆಗೂ ದಾವಾ ಆಸ್ತಿಯನ್ನು ನನ್ನ ತಂದೆಯವರು ಖರೀದಿಸಿದ್ದ ವಿಷಯ ನನಗೆ ಗೊತ್ತಿರಲಿಲ್ಲ.

4. ನಾನು ತಹಸೀಲ್ದಾರ್ ರವರಿಗೆ ಅರ್ಜಿ ನೀಡಿರುವುದಿಲ್ಲ. ನಾನು ಪೋಲೀಸ್ ಠಾಣೆಗೆ ದೂರನ್ನು ನೀಡಿದ್ದು, ಅದರ ಸಂಬಂಧ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ

ಹಾಜರುಪಡಿಸಿರುವುದಿಲ್ಲ. ದಾವಾ ಆಸ್ತಿಯ ಚೆಕ್ಕು ಬಂಧಿ ನನಗೆ ಗೊತ್ತಿದೆ. ದಾವಾ ಆಸ್ತಿಯ ಪೂರ್ವಕ್ಕೆ ಪೂಜಾರಿ ತಿಮ್ಮೇಗೌಡ, ಪಶ್ಚಿಮಕ್ಕೆ ಉತ್ತರಕ್ಕೆ ಹಾಗೂ ದಕ್ಷಿಣಕ್ಕೆ ನನ್ನ ತಂದೆಯವರು ಖರೀದಿಸಿದ ಜಮೀನು ಇರುತ್ತದೆ. ದಾವಾ ಆಸ್ತಿಯ ಮೂರು ದಿಕ್ಕಿನಲ್ಲಿ ನಮಗೆ ಸೇರಿದ ಆಸ್ತಿ ಇರುತ್ತದೆ ಎಂದು ತೋರಿಸಲು ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

5. ನಿಪಿ.6 ರ ಮರಣ ಪ್ರಮಾಣ ಪತ್ರವನ್ನು ನಾನು ಕೆ.ಆರ್.ನಗರದ ತಾಲ್ಲೂಕು ಕಛೇರಿಯಿಂದ ಪಡೆದಿರುತ್ತೇನೆ. ನಿಪಿ.6 ರ ಮರಣ ಪ್ರಮಾಣ ಪತ್ರದಲ್ಲಿ ನನ್ನ ತಂದೆ ಮತ್ತು ನನ್ನ ತಾತನ ಹೆಸರನ್ನು ನಾನೇ ಹೇಳಿ ಬರೆಸಿರುತ್ತೇನೆ. ನಿಪಿ.6 ರ ಮರಣ ಪ್ರಮಾಣ ಪತ್ರದಲ್ಲಿ ನೀವು ಹೇಳಿದ ಹಾಗೆ ನಿಮ್ಮ ತಂದೆ ಮತ್ತು ತಾತನ ಹೆಸರು ಬರೆದಿರುತ್ತಾರೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನಿಪಿ.6 ರಲ್ಲಿ ನನ್ನ ತಾತನ ಹೆಸರನ್ನು ತಿಮ್ಮೇಗೌಡ ಎಂದು ನಮೂದು ಮಾಡುವ ಬದಲು ಚಿಕ್ಕೇಗೌಡ ಎಂದು ತಪ್ಪಾಗಿ ನಮೂದಿಸಿರುತ್ತಾರೆ ಎಂದು ಸಾಕ್ಷಿಯು ನುಡಿದಿರುತ್ತಾರೆ.ನಿಪಿ.6 ರಲ್ಲಿ ನನ್ನ ತಾತನ ಹೆಸರು ತಪ್ಪಾಗಿ ನಮೂದು ಆಗಿರುವ ವಿಷಯವು ನನ್ನ ವಕೀಲರು ನನಗೆ ತಿಳಿಸಿದ ನಂತರದಲ್ಲಿ ಗೊತ್ತಾಗಿರುತ್ತದೆ.

6. ನಿಪಿ.1 ರ ಕ್ರಯ ಪತ್ರದಲ್ಲಿ ಬರೆಸಿರುವ ಚೆಕ್ಕು ಬಂಧಿಗಳು ನನಗೆ ಗೊತ್ತಿದೆ. ಈ ಮೊದಲು ಹೇಳಿದ ಚೆಕ್ಕು ಬಂಧಿಗಳೇ ನಿಪಿ.1 ರ ಚೆಕ್ಕು ಬಂಧಿ ಗಳಾಗಿರುತ್ತದೆ. ನಿಪಿ.5 ರ ಕಾಲಂ ನಂಬರ್ 10 ರಲ್ಲಿ ಇರುವ ವರ್ಗಾವಣೆ ಆದೇಶವನ್ನು ನಾನು ಎಲ್ಲಿಯೂ ಸಹ ಪ್ರಶ್ನಿಸಿರುವುದಿಲ್ಲ.

7. ಸರ್ವೇ ನಂಬರ್ 23/4 ರಲ್ಲಿ 19 ಗುಂಟೆ, ಸರ್ವೇ ನಂಬರ್ 28/5 ರಲ್ಲಿ 19 1/2 ಗುಂಟೆ, ಸರ್ವೇ ನಂಬರ್ 27/12 ಎ ರಲ್ಲಿ 11 ಗುಂಟೆ, ಸರ್ವೇ ನಂಬರ್ 28/3 ರಲ್ಲಿ 25 ಗುಂಟೆ ಜಮೀನನ್ನು ಪ್ರತಿವಾದಿ ಖರೀದಿಸಿರುತ್ತಾರೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನನಗೆ ಪ್ರತಿವಾದಿ ಖರೀದಿಸಿರುವ ಜಮೀನುಗಳ ಬಗ್ಗೆ ಮಾಹಿತಿ ಇಲ್ಲ ಆದರೆ ದಾವಾ ಆಸ್ತಿ ನನ್ನ ತಂದೆ ಖರೀದಿಸಿದ್ದ ಬಗ್ಗೆ ಪ್ರತಿವಾದಿಯು ಅಡ್ಡ ಪಡಿಸಿದಾಗ ಗೊತ್ತಾಗಿರುತ್ತದೆ ಎಂದು ನುಡಿದಿರುತ್ತಾರೆ. ದಾವಾ ಆಸ್ತಿಯ ಸಂಬಂಧ ಕಂದಾಯ ಕಟ್ಟಿದ್ದ ರಸೀದಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಿಪಿ.1 ರ ಚೆಕ್ಕು ಬಂಧಿಗೂ ಮತ್ತು ವಾದ ಪತ್ರದಲ್ಲಿರುವ ಚೆಕ್ಕು ಬಂಧಿಗೂ ವ್ಯತ್ಯಾಸವಿದೆ ಎಂದರೆ ಸರಿಯಲ್ಲ.

8. ವಾದ ಪತ್ರದಲ್ಲಿ, ನಿಪಿ.1ರ ಕ್ರಯ ಪತ್ರದಲ್ಲಿ ಹಾಗೂ ನಿಪಿ.6ರ ಮರಣ ಪ್ರಮಾಣ ಪತ್ರದಲ್ಲಿ ನನ್ನ ತಂದೆಯ ಹಾಗೂ ನನ್ನ ತಾತನ ಹೆಸರು ಬೇರೆ ಬೇರೆಯಾಗಿ ನಮೂದಾಗಿರುತ್ತದೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗಾಗಿ ಪ್ರತಿವಾದಿಯ ಪರ ವಕೀಲರು ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**